**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 165 ವೆಚ್ಚ-12/2017

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ,
ಬೆಂಗಳೂರು, ದಿನಾಂಕ:21.03.2017

**ಸುತ್ತೋಲೆ**

ವಿಷಯ : ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕೈಗೊಳ್ಳುವ ಸಂಗ್ರಹಣೆಗಳ ದರಗಳನ್ನು ಪರಿಗಣಿಸುವ ಬಗ್ಗೆ.

*****

ಅಧಿಸೂಚನೆ ಸಂ:ಸಿಆಸುಇ 2 ಇಸಂಗ್ರ 2009, ದಿನಾಂಕ:09.10.2012 ರಲ್ಲಿ ರೂ.5.00 ಲಕ್ಷಗಳಿಗೆ ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು 2012 ರ ಡಿಸೆಂಬರ್ 3ನೇ ದಿನಾಂಕದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ ಮೂಲಕವೇ ತಮ್ಮ ಸಂಗ್ರಹಣೆಗಳನ್ನು ಸಂಗ್ರಹಿಸತಕ್ಕದ್ದೆಂದು ನಿರ್ದಿಷ್ಟಪಡಿಸಲಾಗಿದೆ. ಅದರನ್ವಯ ಸಂಗ್ರಹಣಾ ಸಂಸ್ಥೆಗಳು ಸಹ ಸಂಗ್ರಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವ ದರಗಳನ್ನು ಪರಿಗಣಿಸಬೇಕೆ ಅಥವಾ ಟೆಂಡರ್ ಡಾಕ್ಯೂಮೆಂಟ್‌ನೊಂದಿಗೆ ಸಲ್ಲಿಸಿರುವ ಅನುಬಂಧಗಳು ಹಾಗೂ ನಮೂನೆಗಳಲ್ಲಿನ ದರಗಳನ್ನು ಪರಿಗಣಿಸಬೇಕೆ ಎಂಬುದರ ಬಗ್ಗೆ ಕೆಲವು ಗೊಂದಲಗಳು ಉಂಟಾಗಿರುವುದು ಕಂಡುಬಂದಿರುತ್ತದೆ.

ಈ ವಿಷಯುವನ್ನು ಪರಿಶೀಲಿಸಲಾಗಿ, ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಎರಡು ಲಕೋಟೆಯ ಪದ್ಧತಿಯಲ್ಲಿ ಕೈಗೊಳ್ಳುವ ಎಲ್ಲಾ ಸಂಗ್ರಹಣೆಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸುವ ದರಗಳನ್ನೇ ಪರಿಗಣಿಸಬೇಕೆ ಹೊರತು ಟೆಂಡರ್ ಡಾಕ್ಯೂಮೆಂಟ್‌ಗಳೊಂದಿಗಿನ ಅನುಬಂಧಗಳು ಹಾಗೂ ನಮೂನೆಗಳು ಮತ್ತು ಇತರೇ ಯಾವುದೇ ಮಾಧ್ಯಮದ ಮೂಲಕ ಸಲ್ಲಿಸುವ ದರಗಳನ್ನು ಪರಿಗಣಿಸತಕ್ಕದಲ್ಲ. ಈ ಸೂಚನೆಯನ್ನು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ತಪ್ಪದೇ ಪಾಲಿಸತಕ್ಕದ್ದು.

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
ಸರ್ಕಾರದ ಎಲ್ಲಾ ಸಂಗ್ರಹಣಾ ಸಂಸ್ಥೆಗಳು.